ಸಾರ್ವಜನಿಕ ಶಿಕ್ಷಣ ಇಲಾಖೆ

**ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು**

Karnataka School Quality Assessment & Accreditation Council

ಕೆ.ಎಸ್.ಇ.ಇ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03. ದೂರವಾಣಿ ಸಂಖ್ಯೆ: 23341615, 23562283, 29720300

ಫ್ಯಾಕ್ಸ್: 080-23347670, e-mail: ksqaacbangalore@gmail.com & ksqaacbengaluru@gmail.com

ಸಂಖ್ಯೆ: ಕೆ4/ಕೆ.ಎಸ್.ಕ್ಯು.ಎ.ಎ.ಸಿ/ಶಾಲಾಸಿದ್ಧಿ/30/2020-21 ದಿನಾಂಕ: 20.03.2021

## ಜ್ಞಾಪನ

ವಿಷಯ:- 2020-21 ನೇ ಸಾಲಿನ ಶಾಲಾಸಿದ್ಧಿ ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಶಾಲೆ/ಕಾಲೇಜು ಸ್ವ-ಮೌಲ್ಯಮಾಪನ ಚಟುವಟಿಕೆಗಳಿಗೆ ಅನುದಾನವನ್ನು ಜಿಲ್ಲಾ ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು (ಅಭಿವೃದ್ಧಿ), ಡಯಟ್ ರವರ ಖಾತೆಗೆ ಬಿಡುಗಡೆ ಮಾಡಿರುವ ಬಗ್ಗೆ.

ಉಲ್ಲೇಖ:- ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ರವರ ಕಛೇರಿ ಪತ್ರ ಸಂಖ್ಯೆ: ಸಶಿಕಾ/ಶಾಲಾಸಿದ್ಧಿ/ಆಂಗ್ಲಕೋಶ/2020-21, ದಿನಾಂಕ:05.01.2021.

~*~*~*~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2020-21 ನೇ ಸಾಲಿನ ಕೆ.ಎಸ್.ಕ್ಯು.ಎ.ಎ.ಸಿ. ವತಿಯಿಂದ ಕೈಗೊಳ್ಳಲಾಗುತ್ತಿರುವ ಶಾಲಾಸಿದ್ಧಿ ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಶಾಲೆ/ಕಾಲೇಜು ಸ್ವ-ಮೌಲ್ಯಮಾಪನದ ಚಟುವಟಿಕೆಗಳಿಗೆ ಜಿಲ್ಲಾ ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು (ಅಭಿವೃದ್ಧಿ), ಡಯಟ್ ರವರ ಖಾತೆಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಜಿಲ್ಲಾ ಉಪನಿರ್ದೇಶಕರು (ಅಭಿವೃದ್ಧಿ), ಡಯಟ್ ರವರು **ಅನುಬಂಧ-1** ರಲ್ಲಿನ ಅನುದಾನವನ್ನು ಜಿಲ್ಲಾ ಹಂತದ ತರಬೇತಿ ಹಾಗೂ ಇತರೆ ಕಾರ್ಯಗಳಿಗಾಗಿ ಜಿಲ್ಲಾ ಹಂತದಲ್ಲಿ ಬಳಸಿಕೊಳ್ಳುವುದು. **ಅನುಬಂಧ-2** ರಲ್ಲಿನ ಅನುದಾನವನ್ನು ಬ್ಲಾಕ್ ಹಂತದ ತರಬೇತಿ ಹಾಗೂ ಇತರೆ ಕಾರ್ಯಗಳಿಗಾಗಿ ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳ ಖಾತೆಗೆ ಬಿಡುಗಡೆ ಮಾಡುವುದು ಹಾಗೂ **ಅನುಬಂಧ-3** ರಲ್ಲಿನ ಅನುದಾನವನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ಶಾಲಾಸಿದ್ಧಿ ಕಾರ್ಯಕ್ರಮದ ಜಿಲ್ಲಾ ನೋಡಲ್ ಅಧಿಕಾರಿಗಳು/ ಡಿಡಿಪಿಯು ರವರ ಖಾತೆಗೆ ಬಿಡುಗಡೆ ಮಾಡುವುದು.

ಕೋವಿಡ್-19 ರ ಹಿನ್ನೆಲೆಯಲ್ಲಿ ಆರ್ಥಿಕ ಹಿತದೃಷ್ಟಿಯಿಂದ ಬಿಡುಗಡೆ ಮಾಡಿದ ಅನುದಾನವನ್ನು ಅಗತ್ಯತೆಗೆ ಅನುಗುಣವಾಗಿ ಮಿತವಾಗಿ ನಿಯಮಾನುಸಾರ ಖರ್ಚು ಮಾಡಲು ತಿಳಿಸುವುದು. ಭರಿಸಿದ ವೆಚ್ಚಕ್ಕೆ ಆಯಾ ಬ್ಲಾಕ್‌ಗಳಿಂದ ಹಾಗೂ ಸಂಬಂಧಿಸಿದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ನೋಡಲ್ ಅಧಿಕಾರಿಗಳು/ಡಿಡಿಪಿಯು ರವರಿಂದ ಉಪಯೋಗಿತ ಪ್ರಮಾಣ ಪತ್ರ ಮತ್ತು ಉಳಿಕೆ ಹಣಕ್ಕೆ ಬ್ಯಾಂಕ್‌ಹುಂಡಿ (ಡಿ.ಡಿ) ಯನ್ನು ಪಡೆಯುವುದು. ನಂತರ ಜಿಲ್ಲಾ ಉಪನಿರ್ದೇಶಕರು (ಅಭಿವೃದ್ಧಿ), ಡಯಟ್ ರವರು ಉಪಯೋಗಿತ ಪ್ರಮಾಣ ಪತ್ರ ಮತ್ತು ಉಳಿಕೆ ಹಣವನ್ನು ಜಿಲ್ಲಾ ಹಂತದಲ್ಲಿ ಕ್ರೋಢೀಕರಿಸಿ ಇಡೀ ಜಿಲ್ಲೆಗೆ ಸಂಬಂಧಿಸಿದಂತೆ ಒಂದೇ ಉಪಯೋಗಿತ ಪ್ರಮಾಣ ಪತ್ರ ಹಾಗೂ ಒಂದೇ ಬ್ಯಾಂಕ್‌ಹುಂಡಿಯನ್ನು ಖರೀದಿಸಿ ಈ ಕಛೇರಿಗೆ **ದಿನಾಂಕ: 10.05.2021** ರೊಳಗಾಗಿ ತಪ್ಪದೇ ಕಳುಹಿಸುವುದು. **ಯಾವುದೇ ಕಾರಣಕ್ಕೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ನೋಡಲ್ ಅಧಿಕಾರಿಗಳು/ಡಿಡಿಪಿಯು ರವರಿಂದ ಬರುವ ಉಪಯೋಗಿತ ಪ್ರಮಾಣ ಪತ್ರ/ಬ್ಯಾಂಕ್‌ಹುಂಡಿಯನ್ನು ಸ್ವೀಕರಿಸಲಾಗುವುದಿಲ್ಲ.**

**RTGS ಮೂಲಕ ಬಿಡುಗಡೆ ಮಾಡಿರುವ ಅನುಬಂಧ-1 ರ ಅನುದಾನವನ್ನು ಜಿಲ್ಲಾ ಹಂತದ ತರಬೇತಿಗಾಗಿ ಈ ಕೆಳಕಂಡಂತೆ ಬಳಕೆ ಮಾಡಲು ತಿಳಿಸಿದೆ.**

- **ಅನುಬಂಧ-1 ರ ಕ್ರ. ಸಂ 12 -** ರಾಜ್ಯ ಹಂತದಲ್ಲಿ ತರಬೇತಿಯನ್ನು ಪಡೆದ 4 ಜನ ಪರಿಣಿತ ಸಂಪನ್ಮೂಲ ವ್ಯಕ್ತಿಗಳಿಂದ (ಒಬ್ಬರು ಪ.ಪೂ.ಶಿ.ಇಲಾಖೆಯ ಸಂ.ವ್ಯ + 3 ಜನ ಸಾ.ಶಿ.ಇಲಾಖೆಯ ಸಂ.ವ್ಯ) ಎಲ್ಲಾ ಜಿಲ್ಲೆಗಳ ಪದವಿ ಪೂರ್ವ ಶಿಕ್ಷಣ ಇಲಾಖೆಯ ಆಯಾ ತಾಲ್ಲೂಕಿನ ಒಬ್ಬರು ತಾಲ್ಲೂಕು ನೋಡಲ್ ಅಧಿಕಾರಿಗಳು ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ತಾಲ್ಲೂಕು ನೋಡಲ್ ಅಧಿಕಾರಿಯು ಸೇರಿದಂತೆ ಎಲ್ಲಾ ಬ್ಲಾಕ್‌ಗಳ ಬಿ.ಇ.ಒ, ಬಿ.ಆರ್.ಸಿ, ಒಬ್ಬರು ಬಿ.ಆರ್.ಪಿ, ಒಬ್ಬರು ಇ.ಸಿ.ಒ, ತಾಲ್ಲೂಕಿಗೆ ಇಬ್ಬರು ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ ಜಿಲ್ಲೆಯ ಎಲ್ಲಾ ಸಿ.ಆರ್.ಪಿಗಳಿಗೆ ಜಿಲ್ಲಾ ಹಂತದಲ್ಲಿ ತರಬೇತಿಗಾಗಿ (ಲಘುಉಪಹಾರ, ವಾಸ್ತವಿಕ ಪ್ರಯಾಣ ಭತ್ಯೆಗಾಗಿ) ತಲಾ **ರೂ. 150/-** ಗಳು.

(ತರಬೇತಿಯನ್ನು ನೀಡುವ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೆ 3 ದಿನಗಳಿಗೆ ಮತ್ತು ತರಬೇತಿಯನ್ನು ಪಡೆಯುವವರಿಗೆ ಒಂದು ದಿನಕ್ಕೆ ಮಾತ್ರ)

- **ಕ್ರ. ಸಂ 13 –** ಜಿಲ್ಲಾ ಹಂತದಲ್ಲಿ ತರಬೇತಿಯನ್ನು ನೀಡುವ 4 ಜನ ಪರಿಣಿತ ಸಂಪನ್ಮೂಲ ವ್ಯಕ್ತಿಗಳಿಗೆ ಸಂಭಾವನೆ ಒಂದು ದಿನಕ್ಕೆ ತಲಾ **ರೂ. 250/–** ಗಳು.

  ಗರಿಷ್ಠ 3 ದಿನಗಳಿಗೆ ಸಂಭಾವನೆಯನ್ನು ಬಿಡುಗಡೆ ಮಾಡಲಾಗಿದ್ದು, ತರಬೇತಿಯಲ್ಲಿ ಭಾಗವಹಿಸುವ ಸಂಪನ್ಮೂಲ ವ್ಯಕ್ತಿಗಳ ಸಂಖ್ಯೆಗೆ ಅನುಗುಣವಾಗಿ ತರಬೇತಿಯ ದಿನಗಳನ್ನು ನಿಗದಿಪಡಿಸಿಕೊಂಡು, ತರಬೇತಿಯನ್ನು ನೀಡಿದ ದಿನಗಳಿಗೆ ಮಾತ್ರ ಸಂಭಾವನೆಯನ್ನು ವಿತರಿಸಿ, ಉಳಿದ ಮೊತ್ತವನ್ನು ರಾಜ್ಯ ಕಛೇರಿಗೆ ಹಿಂದಿರುಗಿಸುವುದು.

  **ಉದಾ:** ಕೊಡಗು (68 ಜನ) ಜಿಲ್ಲೆಯಲ್ಲಿ ಕೇವಲ ಒಂದು ದಿನದಲ್ಲಿಯೇ ತರಬೇತಿಯನ್ನು ಪೂರ್ಣಗೊಳಿಸಬಹುದಾಗಿದ್ದು, ತರಬೇತಿಯನ್ನು ನೀಡುವ 4 ಜನ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೆ ಒಂದು ದಿನದ ಸಂಭಾವನೆಯನ್ನು ವಿತರಿಸಿ, ಉಳಿದ 2 ದಿನಗಳ ಸಂಭಾವನೆಯನ್ನು ರಾಜ್ಯ ಕಛೇರಿಗೆ ಹಿಂದಿರುಗಿಸುವುದು.

- **ಕ್ರ. ಸಂ 14 –** ಜಿಲ್ಲಾ ಡಯಟ್ ಕಛೇರಿ ಸಾದಿಲ್ವಾರು **ರೂ. 1000/–** ಗಳು (ಪ್ರತಿ ಜಿಲ್ಲೆಗೆ).

- **ಕ್ರ. ಸಂ 15 –** ತರಬೇತಿ ಸಾಹಿತ್ಯದ ಮುದ್ರಣವು ವಿಳಂಬವಾಗಿರುವುದರಿಂದ ಅವಶ್ಯಕ ಪುಟಗಳನ್ನು ಜೆರಾಕ್ಸ್ ಮಾಡಿ ತರಬೇತಿಯಲ್ಲಿ ಭಾಗವಹಿಸುವ ಸಂಪನ್ಮೂಲ ವ್ಯಕ್ತಿಗಳಿಗೆ ನೀಡಲು ಸಾದಿಲ್ವಾರು ತಲಾ **ರೂ. 25/–** ಗಳು

**RTGS ಮೂಲಕ ಬಿಡುಗಡೆ ಮಾಡಿರುವ ಅನುಬಂಧ–2 ರ ಅನುದಾನವನ್ನು ಬ್ಲಾಕ್ ಹಂತದ ತರಬೇತಿಗಾಗಿ ಈ ಕೆಳಕಂಡಂತೆ ಬಳಕೆ ಮಾಡಲು ತಿಳಿಸಿದೆ.**

ಬ್ಲಾಕ್ ಹಂತದ ತರಬೇತಿ ಹಾಗೂ ಇತರೆ ಕಾರ್ಯಗಳಿಗಾಗಿ ಜಿಲ್ಲಾ ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು (ಅಭಿವೃದ್ಧಿ), ಡಯಟ್ ರವರ ಖಾತೆಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಪ್ರತಿ ತಾಲ್ಲೂಕಿನ ಶಾಲೆಗಳ ಸಂಖ್ಯೆಗೆ ಅನುಗುಣವಾಗಿ ಲೆಕ್ಕಾಚಾರ ಮಾಡಿ ಆಯಾ ಬ್ಲಾಕ್‌ನ ಕ್ಷೇತ್ರಶಿಕ್ಷಣಾಧಿಕಾರಿಗಳ ಖಾತೆಗೆ ಅನುದಾನವನ್ನು ಬಿಡುಗಡೆ ಮಾಡಿ ನೀಡಿರುವ ಸೂಚನೆಯಂತೆ ಖರ್ಚು ಭರಿಸಲು ತಿಳಿಸುವುದು.

ತಾಲ್ಲೂಕಿನ ಎಲ್ಲಾ ಸರ್ಕಾರಿ ಶಾಲೆಗಳ ಮುಖ್ಯ ಶಿಕ್ಷಕರು ತರಬೇತಿಯಲ್ಲಿ ಕಡ್ಡಾಯವಾಗಿ ಭಾಗವಹಿಸುವಂತೆ ಕ್ರಮವಹಿಸುವುದು ತಾಲ್ಲೂಕು ನೋಡಲ್ ಅಧಿಕಾರಿಗಳ ಜವಾಬ್ದಾರಿಯಾಗಿರುವುದರಿಂದ, ಸದರಿ ನೋಡಲ್ ಅಧಿಕಾರಿಗಳು ಕಡ್ಡಾಯವಾಗಿ ತರಬೇತಿಯಲ್ಲಿ ಹಾಜರಿದ್ದು, ಮೇಲುಸ್ತುವಾರಿಯನ್ನು ವಹಿಸುವುದು.

- **ಅನುಬಂಧ–2 ರ ಕ್ರ. ಸಂ 9 –** ಜಿಲ್ಲಾ ಹಂತದಲ್ಲಿ ತರಬೇತಿಯನ್ನು ಪಡೆದ ಆಯ್ದ 4 ಜನ ತಾಲ್ಲೂಕು ಸಂಪನ್ಮೂಲ ವ್ಯಕ್ತಿಗಳಿಂದ ಸ್ವ–ಮೌಲ್ಯಮಾಪನಕ್ಕೆ ಒಳಪಡುವ ಆಯಾ ಬ್ಲಾಕ್‌ಗಳ ಎಲ್ಲಾ ಸರ್ಕಾರಿ ಶಾಲೆಗಳ ಮುಖ್ಯ ಶಿಕ್ಷಕರಿಗೆ ತಾಲ್ಲೂಕು ಹಂತದಲ್ಲಿ ತರಬೇತಿಗಾಗಿ (ಲಘುಉಪಹಾರ, ವಾಸ್ತವಿಕ ಪ್ರಯಾಣ ಭತ್ಯೆ) ತಲಾ **ರೂ. 130/–** ಗಳು.

  (ತರಬೇತಿಯನ್ನು ನೀಡುವ ಬ್ಲಾಕ್ ಸಂಪನ್ಮೂಲ ವ್ಯಕ್ತಿಗಳಿಗೆ 4 ದಿನಗಳಿಗೆ ಮತ್ತು ತರಬೇತಿಯನ್ನು ಪಡೆಯುವವರಿಗೆ ಒಂದು ದಿನಕ್ಕೆ ಮಾತ್ರ)

- **ಕ್ರ. ಸಂ 10 –** ಬ್ಲಾಕ್ ಹಂತದಲ್ಲಿ ತರಬೇತಿಯನ್ನು ನೀಡುವ 4 ಜನ ತಾಲ್ಲೂಕು ಸಂಪನ್ಮೂಲ ವ್ಯಕ್ತಿಗಳಿಗೆ ಸಂಭಾವನೆ ಒಂದು ದಿನಕ್ಕೆ ತಲಾ **ರೂ. 250/–** ಗಳು.

  ಗರಿಷ್ಠ 4 ದಿನಗಳಿಗೆ ಸಂಭಾವನೆಯನ್ನು ಬಿಡುಗಡೆ ಮಾಡಲಾಗಿದ್ದು, ತರಬೇತಿಯಲ್ಲಿ ಭಾಗವಹಿಸುವ ಸಂಪನ್ಮೂಲ ವ್ಯಕ್ತಿಗಳ ಸಂಖ್ಯೆಗೆ ಅನುಗುಣವಾಗಿ ತರಬೇತಿಯ ದಿನಗಳನ್ನು ನಿಗದಿಪಡಿಸಿಕೊಂಡು ತರಬೇತಿಯನ್ನು ನೀಡಿದ ದಿನಗಳಿಗೆ ಮಾತ್ರ ಸಂಭಾವನೆಯನ್ನು ವಿತರಿಸಿ ಉಳಿದ ಮೊತ್ತವನ್ನು ಜಿಲ್ಲಾ ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು (ಅಭಿವೃದ್ಧಿ), ಡಯಟ್ ರವರಿಗೆ ಹಿಂದಿರುಗಿಸುವುದು.

ತಾಲ್ಲೂಕು ನೋಡಲ್ ಅಧಿಕಾರಿಗಳು ಇಚ್ಛಿಸಿದ್ದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ತರಬೇತಿಯನ್ನು ನೀಡಬಹುದಾಗಿರುತ್ತದೆ. ಆದರೆ ಗರಿಷ್ಠ 4 ಸಂಪನ್ಮೂಲ ವ್ಯಕ್ತಿಗಳು ಮಾತ್ರ ತರಬೇತಿಯನ್ನು ನೀಡಲು ಅವಕಾಶವಿದ್ದು, ಸದರಿ 4 ಸಂಪನ್ಮೂಲ ವ್ಯಕ್ತಿಗಳಿಗೆ ಸಂಭಾವನೆಯನ್ನು ಬಿಡುಗಡೆ ಮಾಡಲಾಗಿದೆ.

- **ಕ್ರ. ಸಂ 11 –** ಬ್ಲಾಕ್‌ನಲ್ಲಿರುವ ಪ್ರತಿ ಶಾಲೆಗಳ ಸಂಖ್ಯೆಗೆ ಅನುಗುಣವಾಗಿ ಪ್ರತಿ ಶಾಲೆಗೆ ರೂ. 15/– ರಂತೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

  ಪ್ರೌಢ ಶಾಲೆಗಳು, TALP Lab ಸೌಲಭ್ಯ ಹೊಂದಿರುವ ಶಾಲೆಗಳು ಹಾಗೂ IT@Schools ಶಾಲೆಗಳಿಗೆ ಮ್ಯಾಪಿಂಗ್ ಆದ ಶಾಲೆಗಳನ್ನು ಹೊರತುಪಡಿಸಿ ಉಳಿದ ಶಾಲೆಗಳ Web portal ನ Dashboard ನಲ್ಲಿ ಸ್ವ–ಮೌಲ್ಯಮಾಪನ ವರದಿಯನ್ನು Upload ಮಾಡುವ ಕಾರ್ಯಕ್ಕಾಗಿ, ಆಯಾ ತಾಲ್ಲೂಕಿನ ಬಿ.ಆರ್.ಸಿ ಕಛೇರಿಯಲ್ಲಿ ಕಾರ್ಯನಿರ್ವಹಿಸುವ ಕಂಪ್ಯೂಟರ್ ಪ್ರೋಗ್ರಾಮರ್ / ಡಾಟಾ ಎಂಟ್ರಿ ಆಪರೇಟರ್ ಅನ್ನು ಬಳಸಿಕೊಳ್ಳುವುದು. Upload ಮಾಡಿದ ಶಾಲೆಗಳ ಸಂಖ್ಯೆಗೆ ಅನುಗುಣವಾಗಿ ಪ್ರತಿ ಶಾಲೆಗೆ ರೂ. 15/– ರಂತೆ ಕಂಪ್ಯೂಟರ್ ಪ್ರೋಗ್ರಾಮರ್ / ಡಾಟಾ ಎಂಟ್ರಿ ಆಪರೇಟರ್‌ಗೆ ಸಂಭಾವನೆಯನ್ನು ಪಾವತಿಸುವುದು.

- **ಕ್ರ. ಸಂ 12 –** ಬಿ.ಇ.ಒ ಕಛೇರಿ ಸಾದಿಲ್ವಾರು **ರೂ. 1200/–** ಗಳು (ಪ್ರತಿ ಬ್ಲಾಕ್‌ಗೆ).

**RTGS ಮೂಲಕ ಬಿಡುಗಡೆ ಮಾಡಿರುವ ಅನುಬಂಧ–3 ರ ಅನುದಾನವನ್ನು ಈ ಕೆಳಕಂಡಂತೆ ಬಳಕೆ ಮಾಡಲು ತಿಳಿಸಿದೆ.**

ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ಜಿಲ್ಲಾ ಹಂತದಲ್ಲಿ ತರಬೇತಿಯನ್ನು ನೀಡಲು ಜಿಲ್ಲಾ ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು (ಅಭಿವೃದ್ಧಿ), ಡಯಟ್ ರವರ ಖಾತೆಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಸದರಿ ಅನುದಾನವನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ಶಾಲಾಸಿದ್ಧಿ ಕಾರ್ಯಕ್ರಮದ ಜಿಲ್ಲಾ ನೋಡಲ್ ಅಧಿಕಾರಿಗಳು/ಡಿಡಿಪಿಯು ರವರ ಖಾತೆಗೆ ಬಿಡುಗಡೆ ಮಾಡಿ, ನೀಡಿರುವ ಸೂಚನೆಯಂತೆ ಖರ್ಚು ಭರಿಸಲು ತಿಳಿಸುವುದು.

ಜಿಲ್ಲೆಯ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ತರಬೇತಿಯಲ್ಲಿ ಕಡ್ಡಾಯವಾಗಿ ಭಾಗವಹಿಸುವಂತೆ ಕ್ರಮವಹಿಸುವುದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಶಾಲಾಸಿದ್ಧಿ ಕಾರ್ಯಕ್ರಮದ ಜಿಲ್ಲಾ ನೋಡಲ್ ಅಧಿಕಾರಿಗಳ ಜವಾಬ್ದಾರಿಯಾಗಿರುವುದರಿಂದ, ಸದರಿ ನೋಡಲ್ ಅಧಿಕಾರಿಗಳು ಕಡ್ಡಾಯವಾಗಿ ತರಬೇತಿಯಲ್ಲಿ ಹಾಜರಿದ್ದು, ಮೇಲುಸ್ತುವಾರಿಯನ್ನು ವಹಿಸುವುದು.

- **ಅನುಬಂಧ–3 ರ ಕ್ರ. ಸಂ 8 –** ಜಿಲ್ಲಾ ಹಂತದಲ್ಲಿ ತರಬೇತಿಯನ್ನು ಪಡೆದ ಆಯ್ದ 4 ಜನ ತಾಲ್ಲೂಕು ಸಂಪನ್ಮೂಲ ವ್ಯಕ್ತಿಗಳಿಂದ ಸ್ವ–ಮೌಲ್ಯಮಾಪನಕ್ಕೆ ಒಳಪಡುವ ಜಿಲ್ಲೆಯ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ಜಿಲ್ಲಾ ಹಂತದಲ್ಲಿ ಒಂದು ದಿನದ ತರಬೇತಿಗಾಗಿ (ಲಘುಉಪಹಾರ, ವಾಸ್ತವಿಕ ಪ್ರಯಾಣ ಭತ್ಯೆ) ತಲಾ **ರೂ. 150/–** ಗಳು.

- **ಕ್ರ. ಸಂ 9 –** ಜಿಲ್ಲಾ ಹಂತದಲ್ಲಿ ತರಬೇತಿಯನ್ನು ನೀಡುವ 4 ಜನ ತಾಲ್ಲೂಕು ಸಂಪನ್ಮೂಲ ವ್ಯಕ್ತಿಗಳಿಗೆ ಸಂಭಾವನೆ ಒಂದು ದಿನಕ್ಕೆ ತಲಾ **ರೂ. 250/–** ಗಳು.

  ಜಿಲ್ಲಾ ನೋಡಲ್ ಅಧಿಕಾರಿಗಳು ಇಚ್ಛಿಸಿದ್ದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ತರಬೇತಿಯನ್ನು ನೀಡಬಹುದಾಗಿರುತ್ತದೆ. ಆದರೆ ಗರಿಷ್ಠ 4 ಸಂಪನ್ಮೂಲ ವ್ಯಕ್ತಿಗಳು ಮಾತ್ರ ತರಬೇತಿಯನ್ನು ನೀಡಲು ಅವಕಾಶವಿದ್ದು, ಸದರಿ 4 ಸಂಪನ್ಮೂಲ ವ್ಯಕ್ತಿಗಳಿಗೆ ಸಂಭಾವನೆಯನ್ನು ಬಿಡುಗಡೆ ಮಾಡಲಾಗಿದೆ.

- **ಕ್ರ. ಸಂ 10 –** ಸಾದಿಲ್ವಾರು ರೂ. 500/– ರಂತೆ (ಪ್ರತಿ ಜಿಲ್ಲೆಗೆ)

**(ಜಿಲ್ಲಾವಾರು ಬಿಡುಗಡೆ ಮಾಡಲಾದ ಕ್ರೋಢೀಕೃತ ಅನುದಾನದ ವಿವರವನ್ನು ಅನುಬಂಧ–4 ರಲ್ಲಿ ನೀಡಲಾಗಿದೆ)**

ಅನುಬಂಧ-1, 2 ಹಾಗೂ 3 ರಂತೆ ಬಿಡುಗಡೆ ಮಾಡಿರುವ ಅನುದಾನವನ್ನು ನಿಯಮಾನುಸಾರ ಖರ್ಚು ಭರಿಸಿ ಮೂಲ ಓಚರ್‌ಗಳನ್ನು ತಮ್ಮಲ್ಲಿಯೇ ಉಳಿಸಿಕೊಂಡು ಲೆಕ್ಕಪತ್ರ ತಪಾಸಣೆಯ ಸಂದರ್ಭದಲ್ಲಿ ಹಾಜರುಪಡಿಸಿ ಅನುಮೋದನೆ ಪಡೆಯುವುದು ಆಯಾ ಜಿಲ್ಲಾ ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು (ಅಭಿವೃದ್ಧಿ), ಡಯಟ್ ರವರ ಜವಾಬ್ದಾರಿಯಾಗಿರುತ್ತದೆ.

- ಭರಿಸಲಾದ ವೆಚ್ಚಕ್ಕೆ ಉಪಯೋಗಿತ ಪ್ರಮಾಣ ಪತ್ರವನ್ನು ಹಾಗೂ ಉಳಿಕೆ ಹಣಕ್ಕೆ ಬ್ಯಾಂಕ್‌ಹುಂಡಿಯನ್ನು **ದಿನಾಂಕ: 10.05.2021** ರ ಒಳಗೆ "Executive Director, K.S.Q.A.A.C, Bengaluru" ಇವರ ಹೆಸರಿಗೆ ಖರೀದಿಸಿ ಅಥವಾ RTGS / NEFT ಮೂಲಕ ಈ ಕಛೇರಿ ಕೆನರಾ ಬ್ಯಾಂಕ್ ಖಾತೆ ಸಂಖ್ಯೆ: 0409101077623, IFSC Code: CNRB0000409 ಗೆ ಉಳಿಕೆ ಹಣವನ್ನು ಜಮಾ ಮಾಡಿ, ಜಮಾ ಮಾಡಿದ ಚಲನ್ ಪ್ರತಿಯನ್ನು ಈ ಕಛೇರಿಗೆ ತಪ್ಪದೇ ಸಲ್ಲಿಸುವುದು.

ಕಾರ್ಯನಿರ್ವಾಹಕ ನಿರ್ದೇಶಕರು
ಕೆ.ಎಸ್.ಕ್ಯು.ಎ.ಎ.ಸಿ

ಪ್ರತಿಯನ್ನು:-

1. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ.
2. ಮಾನ್ಯ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ
3. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ ಸೂಕ್ತ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಜಿಲ್ಲಾ ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು (ಅಭಿವೃದ್ಧಿ), ಡಯಟ್ ರವರಿಗೆ ಸೂಕ್ತ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಜಿಲ್ಲೆಗಳ ಶಾಲಾಸಿದ್ಧಿ ನೋಡಲ್ ಅಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಸೂಕ್ತ ಕ್ರಮಕ್ಕಾಗಿ.
6. ರಾಜ್ಯದ ಎಲ್ಲಾ ತಾಲ್ಲೂಕು ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ಎಲ್ಲಾ ತಾಲ್ಲೂಕು ಹಂತದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
7. ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳ ಮುಖ್ಯಸ್ಥರಿಗೆ (ಕ್ಷೇತ್ರಶಿಕ್ಷಣಾಧಿಕಾರಿಗಳ ಮೂಲಕ).
8. ಕಛೇರಿ ಪ್ರತಿ.